# ಶ್ರೀಮಾತೆಯವರ ಜೀವನದಲ್ಲಿ ದಿವ್ಯಭಾವದ ಘಟನೆಗಳು

ವೈಷ್ಣವಿ ಪಿ.

ಶ್ರೀಮಾತೆಯವರು ತಮ್ಮ ಅಸಾಧಾರಣ ದೈವೀ ವ್ಯಕ್ತಿತ್ವವನ್ನು ಸದಾ ಮರೆಮಾಚಿದ್ದರು; ಆದರೂ ಅಲ್ಲಲ್ಲಿ ಆಕಸ್ಮಿಕವಾಗಿ ಅವರ ದಿವ್ಯಭಾವಗಳು ಪ್ರಕಟಗೊಂಡಿವೆ. ಅಂಥ ಕೆಲವು ಘಟನೆಗಳನ್ನು ಪರಿಭಾವಿಸುವುದರಿಂದ ಶ್ರೀಮಾತೆಯವರ ದಿವ್ಯಭಾವವನ್ನು ಅರಿತುಕೊಳ್ಳಲು ಪ್ರಯತ್ನಿಸಬಹುದು. ಈ ಕುರಿತು ಇಲ್ಲಿ ಬರೆದಿರುವ ಲೇಖಕಿ, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರಾಗಿದ್ದು, ವೃತ್ತಿಯಲ್ಲಿ ಕಂಪ್ಯೂಟರ್ ಇಂಜಿನಿಯರ್ ಆಗಿದ್ದಾರೆ.

ಶ್ರೀಮಾತೆ ಶಾರದಾದೇವಿಯವರು ಯಾರು? ಕೇವಲ ಸಾಮಾನ್ಯ ಹಳ್ಳಿಯ ಹೆಂಗಸಾಗಿ, ಶ್ರೀರಾಮಕೃಷ್ಣರ ಪತ್ನಿಯೇ ಅಥವಾ ಸಾಕ್ಷಾತ್ ಜಗನ್ಮಾತೆಯೆ? ಜಯರಾಮಬಾಟಿಯಂತಹ ಕುಗ್ರಾಮದಲ್ಲಿ, ಬಡ ಕುಟುಂಬವೊಂದರಲ್ಲಿ ಜನಿಸಿ, ಸಾಮಾನ್ಯ ಹೆಂಗಸಿನಂತೆ ಮನೆಗೆಲಸ, ಭಕ್ತರಿಗೆ ನಾನಾ ಬಗೆಯ ಅಡುಗೆ ಮಾಡಿ ಬಡಿಸುತ್ತ, ಬಂಧುಬಾಂಧವರಿಂದ ನಾನಾ ಕಷ್ಟಗಳನ್ನು ಅನುಭವಿಸುತ್ತ ತಮ್ಮ ದೈವತ್ವವನ್ನು ಮರೆಮಾಚಿದರು. ಅಲ್ಲದೆ, ಶ್ರೀರಾಮಕೃಷ್ಣರು ಏನು ಸಾಮಾನ್ಯ ವ್ಯಕ್ತಿಯೆ? ಅವರು ಅವತಾರ ಪುರುಷರು. ಅವತಾರ ಪುರುಷರ ಪತ್ನಿಯಾಗಿ ಅವರ ಲೀಲೆಯಲ್ಲಿ ಸಹಾಯ ಮಾಡಬೇಕಾದರೆ ಶ್ರೀಮಾತೆಯವರ ಸಾಮರ್ಥ್ಯ, ಆಧ್ಯಾತ್ಮಿಕತೆ ಎಂತಹದು ಎಂದು ನಾವು ಊಹಿಸಬಲ್ಲೆವೆ?

### ಶ್ರೀರಾಮಕೃಷ್ಣರ ನುಡಿಗಳಲ್ಲಿ ಶ್ರೀಮಾತೆಯವರ ದೈವತ್ವ

ಶ್ರೀಮಾತೆಯವರು ಲಜ್ಜಾ ಸ್ವರೂಪಿಣಿ. ಶ್ರೀರಾಮಕೃಷ್ಣರನ್ನು ಕಾಣಲು ಬರುತ್ತಿದ್ದ ಎಷ್ಟೋ ಭಕ್ತರಿಗೆ ಶ್ರೀರಾಮಕೃಷ್ಣರ ಪತ್ನಿ ನಹಬತ್‌ನಲ್ಲಿ ವಾಸಿಸುತ್ತಿದ್ದಾರೆ ಎಂದಷ್ಟೇ ತಿಳಿದಿತ್ತು, ಆದರೆ ಅವರನ್ನು ಕಂಡಿದ್ದು ಅಲ್ಪ ಮಂದಿ ಮಾತ್ರ. ಅವರನ್ನು ಕಂಡಿದ್ದವರು ಕೆಲವರು ಅವರನ್ನು ಶ್ರೀರಾಮಕೃಷ್ಣರ ಪತ್ನಿಯೆಂದು ಸಾಮಾನ್ಯ ವ್ಯಕ್ತಿಯಾಗಿ ಕಂಡು ಮಾತನಾಡಿಸುತ್ತಿದ್ದರು. ಶ್ರೀರಾಮಕೃಷ್ಣರ ಸಮಾಧಿಯ ನಂತರ ಶ್ರೀಮಾತೆಯವರ ಬಳಿ ಹಲವು ಜನ ದೀನರು, ಸಾಧುಗಳು, ಗೃಹಸ್ಥ ಭಕ್ತರು ಬರುತ್ತಿದ್ದರು. ಎಲ್ಲರನ್ನೂ ಅವರು ತಮ್ಮ ಮಕ್ಕಳೆಂದೇ ಕಾಣುತ್ತಾ ಪ್ರೀತಿ, ಆದರಗಳಿಂದ ಕಾಣುತ್ತಿದ್ದರು. ಅವರೆಲ್ಲ ಶ್ರೀಮಾತೆಯವರನ್ನು ತಮ್ಮ ತಾಯಿಯಂದೇ ಕಾಣುತ್ತಿದ್ದರು. ಆದರೆ ಅವರಲ್ಲಿ ಎಷ್ಟು ಜನರು ಶ್ರೀಮಾತೆಯವರನ್ನು ಸಾಕ್ಷಾತ್ ಜಗನ್ಮಾತೆಯಂದು ಅರಿತರು? ಕೆಲವು ಭಕ್ತರು ಅವರ ದೈವತ್ವವನ್ನು ಕುರಿತು ಅವರನ್ನೇ ಕೇಳಿದಾಗ ಶ್ರೀಮಾತೆಯವರು ಏನನ್ನೂ ಉತ್ತರಿಸದೆ, ವಿಷಯವನ್ನು ತೇಲಿ ಹಾಕಿದ್ದೂ ಇದೆ. ಎಲ್ಲೋ ಕೆಲವು ಬಾರಿ ತಮ್ಮ ದೈವತ್ವವನ್ನು ಸ್ವತಃ ತಾವೇ ಒಪ್ಪಿಕೊಂಡಿದ್ದೂ ಇದೆ. ಶ್ರೀರಾಮಕೃಷ್ಣರೇ ಹಲವು ಬಾರಿ ಶ್ರೀಮಾತೆಯವರ ದೈವತ್ವವನ್ನು ಪ್ರಕಟಪಡಿಸುವ ಸಂದರ್ಭಗಳು ಕೂಡ ಕೆಲವು ಕಡೆ ಕಂಡುಬರುತ್ತವೆ.



ಒಂದು ದಿನ ಶ್ರೀರಾಮಕೃಷ್ಣರು ಹೀಗೇ ಮಾತಿನ ಸಂದರ್ಭದಲ್ಲಿ ಗೋಲಾಪ್ ಮಾ ಹತ್ತಿರ ಹೇಳುತ್ತಾರೆ: ''ನೋಡು, ಈ ಶಾರದೆ ಸಾಕ್ಷಾತ್ ಸರಸ್ವತಿ. ಅವಳು ಜಗತ್ತಿಗೆ ಜ್ಞಾನ ನೀಡುವುದಕ್ಕೋಸ್ಕರವೇ ಅವತರಿಸಿದ್ದಾಳೆ. ಆದರೆ ಅವಿವೇಕಿಗಳಾದ ಜನ ತನ್ನನ್ನು ಅಪವಿತ್ರ ದೃಷ್ಟಿಯಿಂದ ನೋಡಿ ಅಧೋಗತಿಗೆ ಗುರಿಯಾಗದಿರಲಿ ಅಂತ ಈ ಸಲ ಅವಳು ತನ್ನ ದೈವೀ ಸೌಂದರ್ಯವನ್ನು ಮರೆಮಾಡಿಕೊಂಡು ಬಂದಿದ್ದಾಳೆ.'' ಇನ್ನೊಂದು ಸಂದರ್ಭದಲ್ಲಿ ಅವರು ಹೇಳುತ್ತಾರೆ: ''ಅವಳು ಸಾರದಾಯಿನಿ, ಜ್ಞಾನ ಕೊಡುವವಳು! ಅವಳೇನು ಸಾಮಾನ್ಯ ಹೆಂಗಸು ಅಂತ ತಿಳಿದುಕೊಂಡೆಯಾ? ಅವಳು ನನ್ನ ಶಕ್ತಿ.'' *('ಶ್ರೀಶಾರದಾದೇವಿ ಜೀವನಗಂಗಾ', ಪು. ೧೨೧).* 'ಅವಳು ನನ್ನ ಶಕ್ತಿ'ಯೆಂದರೆ ಶ್ರೀಮಾತೆ

ಸಾಕ್ಷಾತ್ ಜಗನ್ಮಾತೆಯೇ. ಸೃಷ್ಟಿ-ಸ್ಥಿತಿ-ಪ್ರಳಯಕಾರಿಣಿ. ಜೀವಿಗಳನ್ನು ಮೋಹದಲ್ಲಿ ಸಿಲುಕಿಸುವವಳು ಅವಳೇ, ಬಂಧನದಿಂದ ಮುಕ್ತಿ ನೀಡುವವಳೂ ಅವಳೇ.

ಶ್ರೀಮಾತೆಯವರೇ ಸ್ವಯಂ ಆದ್ಯಾಶಕ್ತಿ ಎಂದು ತಿಳಿಯಲು ಮತ್ತೊಂದು ಘಟನೆಯನ್ನು ನೋಡಬಹುದು. ಒಂದು ದಿನ ಶ್ರೀರಾಮಕೃಷ್ಣರು ಪಂಚವಟಿಗೆ ಹೋಗುತ್ತಿದ್ದಾಗ, ನಹಬತ್ತಿನಲ್ಲಿ ಶ್ರೀಮಾತೆಯವರು ಒಬ್ಬರೇ ಚಪಾತಿಯನ್ನು ಲಟ್ಟಿಸುತ್ತಿದ್ದುದನ್ನು ನೋಡಿದರು. ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಲಾಟು (ಮುಂದೆ ಸ್ವಾಮಿ ಅದ್ಭುತಾನಂದರು) ಪಂಚವಟಿಯಲ್ಲಿ ಕುಳಿತು ಧ್ಯಾನ ಮಾಡುತ್ತಿದ್ದದನ್ನು ಶ್ರೀರಾಮಕೃಷ್ಣರು ಕಂಡರು. ಅವರು ಲಾಟುವನ್ನು ಕರೆದು, "ಓ ಲಾಟು, ನೀನು ಇಲ್ಲಿ ಕುಳಿತುಬಿಟ್ಟಿದ್ದೀಯಾ? ನೋಡು ಇಲ್ಲಿ ನೀನು ಯಾರ ಮೇಲೆ ಧ್ಯಾನ ಮಾಡುತ್ತಿದ್ದೀಯೋ ಅವಳು ಅಲ್ಲಿ ಚಪಾತಿ ಲಟ್ಟಿಸುತ್ತಿದ್ದಾಳೆ. ಆಕೆಗೆ ಯಾರೂ ಸಹಾಯಕ್ಕಿಲ್ಲ. ಹೋಗು, ಅವಳಿಗೆ ಸಹಾಯ ಮಾಡು!" ಎಂದರು. ಈ ರೀತಿ ಗೃಹಕೃತ್ಯದಲ್ಲಿ ತೊಡಗಿದವರನ್ನು ನೋಡಿದರೆ ಯಾರಿಗಾದರೂ ಅವರು ಜಗನ್ಮಾತೆಯೆಂದು ಅನಿಸುತ್ತದೆಯೆ? ನಾವು ಪ್ರತಿನಿತ್ಯ ಪೂಜೆ, ಪ್ರಾರ್ಥನೆ ಮಾಡುವ ಆ ಜಗನ್ಮಾತೆಯೇ ಶ್ರೀ ಶಾರದಾದೇವಿಯವರ ರೂಪತಾಳಿ ಬಂದಿದ್ದಾರೆ ಎಂದು ಈ ಘಟನೆಯಿಂದ ತಿಳಿಯಬಹುದು.

## ಶ್ರೀಮಾತೆ ಶಕ್ತಿಯ ಅವತಾರ


ಶ್ರೀರಾಮಕೃಷ್ಣರು ಸ್ವಯಂ ನಾರಾಯಣ ಅಂದ ಮೇಲೆ ಶ್ರೀಮಾತೆ ಅವರ ಶಕ್ತಿ; ಶ್ರೀಮಾತೆ ಸ್ವಯಂ ಲಕ್ಷ್ಮೀದೇವಿಯೇ ಆಗುವರು. ಹೇಗೆ ತ್ರೇತಾಯುಗದಲ್ಲಿ ಶ್ರೀರಾಮನ ಅವತಾರ ಲೀಲೆಗೆ ಸಹಾಯ ಮಾಡಲು ಸೀತಾಮಾತೆ ಅವತರಿಸಿದಳೋ; ಹೇಗೆ ದ್ವಾಪರ ಯುಗದಲ್ಲಿ ಶ್ರೀಕೃಷ್ಣನ ಅವತಾರದ ಲೀಲೆಗೆ ರುಕ್ಮಿಣಿ ಅವತರಿಸಿದಳೋ; ಹಾಗೆ ಈಗ ಶ್ರೀರಾಮಕೃಷ್ಣರ ಅವತಾರದ ಲೀಲೆಗೆ ಸಹಾಯ ಮಾಡಲು ಶ್ರೀ ಶಾರದಾದೇವಿಯಾಗಿ ಅದೇ ಶಕ್ತಿ ಅವತರಿಸಿದಳು. ಶ್ರೀಮಾತೆಯವರೇ ಸೀತಾಮಾತೆ ಎಂದು ಪ್ರಮಾಣೀಕರಿಸಲು ಒಂದು ಘಟನೆಯು ನಮಗೆ ಸಿಗುತ್ತದೆ. ಶ್ರೀಮಾತೆಯವರು ದಕ್ಷಿಣಭಾರತದ ಯಾತ್ರೆ ಮಾಡುವಾಗ ರಾಮೇಶ್ವರಕ್ಕೆ ಹೋಗಿದ್ದರು. ರಾಮೇಶ್ವರ ಶಿವನ ದರ್ಶನ ಮಾಡಿದಾಗ ಅವರಿಗೆ ಅರಿವಿಲ್ಲದೆ ಅವರ ಬಾಯಿಂದ, "ನಾನು ಹಿಂದೆ ಹೇಗೆ ಬಿಟ್ಟುಹೋಗಿದ್ದೆನೋ ಈಗಲೂ ಹಾಗೆಯೇ ಇದೆ" ಎಂದು ಹೊರಬಿದ್ದ ಈ ನುಡಿ ನಿಜಕ್ಕೂ ಬಹಳ ಅದ್ಭುತವಾದದ್ದು. ಅಲ್ಲೇ ಹತ್ತಿರದಲ್ಲಿ ನಿಂತಿದ್ದ ಸ್ವಾಮಿ ಧೀರಾನಂದರಿಗೆ ಹಾಗೂ ಕೆಲವು ಭಕ್ತರಿಗೆ ಇದು ಕೇಳಿಸಿತು. ಅವರು ಕುತೂಹಲದಿಂದ, "ಏನಂದಿರಿ ತಾಯಿ?" ಎಂದು ಕೇಳಿದರು. ಆಗ ಶ್ರೀಮಾತೆಯವರು ಮೈತಿಳಿದು ನಗುಮೊಗದಿಂದ, "ಏನಿಲ್ಲ; ಏನೋ ಅರ್ಥವಿಲ್ಲದ ಮಾತು ಹೊರಬಂತು ಅಷ್ಟೆ" ಎಂದು ಮಾತು ತೇಲಿಸಿಬಿಟ್ಟರು. *(ಅಲ್ಲೇ, ಪು.೩೭೯)* ಈ ಬಾರಿ ಅವರು ಗುರುವಿನ ಸ್ಥಾನ, ಮಾತೃ ಸ್ಥಾನದಲ್ಲಿ ನಿಂತು ತಮ್ಮ ಬಳಿಗೆ ಬಂದ ಎಲ್ಲಾ ರೀತಿಯ ಭಕ್ತರಿಗೆ ಜ್ಞಾನವನ್ನು ನೀಡಿ ಉದ್ಧರಿಸಿದರು.

## ಶ್ರೀಮಾತೆಯವರ ಭಾವಸಮಾಧಿ

ಶ್ರೀಮಾತೆಯವರಲ್ಲಿ ಎದ್ದು ಕಾಣುವಂತಹ ಯಾವ ವೈಭವ - ವೈಶಿಷ್ಟ್ಯವೂ ಇಲ್ಲ. ಶ್ರೀರಾಮಕೃಷ್ಣರಲ್ಲಾದರೋ ನಾವು ಜ್ಞಾನದ, ಅಧ್ಯಾತ್ಮದ ಭಾವತರಂಗಗಳನ್ನು ಕಾಣಬಹುದು. ಆದರೆ ಶ್ರೀಮಾತೆಯವರು ಜ್ಞಾನದ, ಅಧ್ಯಾತ್ಮದ ಭಾವತರಂಗಗಳನ್ನು ಸಂಪೂರ್ಣವಾಗಿ ಅಡಗಿಸಿಕೊಂಡಿದ್ದರು. ಅಂತಹವರನ್ನು ದೇವಿಯೆಂದರೆ ನಂಬುವರೆ? ಆದರೆ ಒಂದು ಸ್ವಾರಸ್ಯಕರ ಘಟನೆಯನ್ನು ನೋಡಬಹುದು. ಒಂದು ದಿನ ಶ್ರೀಮಾತೆಯವರು ತಮಗೆ ಯಾವುದೇ ಅಧ್ಯಾತ್ಮ ಅನುಭವವಾಗುತ್ತಿಲ್ಲವಲ್ಲಾ ಎಂದು ಯೋಗಿನ್ ಮಾಳ ಬಳಿ ಮರುಕದಿಂದ ನುಡಿದರು. ತನಗೂ ಅಧ್ಯಾತ್ಮದ ಅನುಭವವಾಗುವಂತೆ ಶ್ರೀರಾಮಕೃಷ್ಣರ ಬಳಿ ನೀನು ನನ್ನ ಪರವಾಗಿ ಕೇಳು ಎಂದು ಹೇಳಿ ಕಳುಹಿಸಿದರು. ಯೋಗಿನ್ ಮಾ ಶ್ರೀರಾಮಕೃಷ್ಣರ ಬಳಿಗೆ ಹೋಗಿ, ಶ್ರೀಮಾತೆಯವರ ನಿವೇದನೆಯನ್ನು ಹೇಳಿದಳು. ಅದಕ್ಕೆ ಶ್ರೀರಾಮಕೃಷ್ಣರು ಏನನ್ನೂ ಉತ್ತರಿಸಲಿಲ್ಲ. ಯೋಗಿನ್ ಮಾ ಸುಮ್ಮನೆ ಹಿಂದಿರುಗಿ ಬಂದು ಶ್ರೀಮಾತೆಯವರ ಕೋಣೆಯ ಬಾಗಿಲನ್ನು ಸರಿಸಿ ನೋಡುತ್ತಾಳೆ, ಆಶ್ಚರ್ಯ! ಶ್ರೀಮಾತೆಯವರು ಒಂದು ಬಾರಿ ಜೋರು ನಗುತ್ತಾರೆ, ಮತ್ತೊಂದು ಬಾರಿ ಅಳುತ್ತಾರೆ, ಭಾವತರಂಗಗಳಲ್ಲಿ ಮುಳುಗಿದ್ದಾರೆ. ಶ್ರೀಮಾತೆಯವರೇ ಕೃಪೆ ಮಾಡದಿದ್ದರೆ ಅವರನ್ನು ಅರಿಯಲು ನಮ್ಮಿಂದ ಸಾಧ್ಯವೆ? ಅದಕ್ಕೆ ಶ್ರೀರಾಮಕೃಷ್ಣರು ಹಾಸ್ಯವಾಗಿ ನುಡಿಯುತ್ತಾರೆ: 'ಅವಳು ಬೂದಿ ಬಳಿದುಕೊಂಡ ಬೆಕ್ಕಿನ ಹಾಗಿದ್ದಾಳೆ!' ಎಂದು.

## ಷೋಡಶೀ ಪೂಜೆಯ ಘಟನೆ

ಶ್ರೀರಾಮಕೃಷ್ಣರು ಶ್ರೀಮಾತೆಯವರ ದೈವತ್ವವನ್ನು ಬರೀ ಮಾತುಗಳಲ್ಲಿ ಹೇಳದೆ, ಅವರು ಶ್ರೀಮಾತೆಯವರನ್ನು ಸ್ವಯಂ ಭಗವತಿಯೆಂದೇ ಕಾಣುತ್ತಿದ್ದರು. ಅವರು ಶ್ರೀಮಾತೆಯವರಿಗೆ ಷೋಡಶೀ ಪೂಜೆ ಮಾಡುವುದರ ಮೂಲಕ ಅವರಿಗೆ ಜಗನ್ಮಾತೆಯ ಸ್ಥಾನವನ್ನು ನೀಡಿ ತಮ್ಮ ಸಕಲ ಸಾಧನೆಗಳ ಫಲವನ್ನು ಸಮರ್ಪಿಸಿದರು. ಶ್ರೀಮಾತೆಯವರು ಹೊರನೋಟಕ್ಕೆ ಕಾಣುವಂತೆ ಯಾವುದೇ ಆಧ್ಯಾತ್ಮಿಕ ಸಾಧನೆಯನ್ನು ಮಾಡದಿದ್ದರೂ ಶ್ರೀರಾಮಕೃಷ್ಣರ ಸಾಧನೆಯ ಫಲವನ್ನು ಸ್ವೀಕರಿಸಿ ಅರಗಿಸಿಕೊಳ್ಳಬೇಕಾದರೆ ಅವರಲ್ಲಿ ಎಷ್ಟು ಸಾಮರ್ಥ್ಯವಿದ್ದಿರಬೇಕು! ಅವರ ಆಧ್ಯಾತ್ಮಿಕ ಮಟ್ಟ ಎಂತಹದಿದ್ದಿರಬಹುದು! ಸಾಮಾನ್ಯ ವ್ಯಕ್ತಿಗೆ ತನ್ನನ್ನು ಸ್ವಲ್ಪ ಹೊಗಳಿದರೂ ಅದನ್ನು ತಡೆಯಲಾಗುವುದಿಲ್ಲ, ಅದರಿಂದ ಆನಂದಭರಿತರಾಗಿ ಮೆರೆದಾಡುತ್ತಾರೆ. ಅಂತಹದರಲ್ಲಿ ಶ್ರೀಮಾತೆಯವರು ಷೋಡಶೋಪಚಾರ ಪೂಜೆಯನ್ನು ಸ್ವೀಕರಿಸಿದ ನಂತರವೂ ಹೇಗೆ ನಿಶ್ಚಲ-ನಿರ್ವಿಕಾರಚಿತ್ತರಾಗಿದ್ದುದು? ಮುಂದೊಮ್ಮೆ ಕೆಲವು ಭಕ್ತೆಯರು ಕುತೂಹಲದಿಂದ



ಕೇಳಿದರು: ''ಅಮ್ಮಾ, ನೀವು ಅಷ್ಟೊಂದು ಲಜ್ಜೆಯ ಸ್ವಭಾವದವರು. ಹೀಗಿರುವಾಗ ನೀವು ಶ್ರೀರಾಮಕೃಷ್ಣರಿಂದ ಹೇಗೆ ಪೂಜೆ ಮಾಡಿಸಿಕೊಂಡಿರಿ?'' ಅದಕ್ಕೆ ಶ್ರೀಮಾತೆ ಉತ್ತರಿಸಿದರು: ''ಆಗ ನಾನು ನಾನಾಗಿರಲಿಲ್ಲ.'' ಅಂದು ಶ್ರೀಮಾತೆಯವರು ಜಗನ್ಮಾತೆಯಾಗಿಯೇ ಷೋಡಶೀ ಪೂಜೆಯನ್ನು ಸ್ವೀಕರಿಸಿದ್ದರು ಎಂದು ಇದರಿಂದ ನಾವು ಊಹಿಸಬಹುದು.

### ಶ್ರೀಮಾತೆಯವರ ಬಗ್ಗೆ ಸ್ವಾಮೀಜಿ

ಶ್ರೀರಾಮಕೃಷ್ಣರು ಶ್ರೀಮಾತೆಯವರಲ್ಲಿ ಜಗನ್ಮಾತೆಯನ್ನು ಕಂಡು ಪೂಜೆ ಮಾಡುವುದರ ಮೂಲಕ ಸ್ತ್ರೀಕುಲವನ್ನೇ ಅತ್ಯುನ್ನತ ಸ್ಥಾನದಲ್ಲಿ ಪ್ರತಿಷ್ಠಾಪಿಸಿದರು, ಅಷ್ಟೇ ಅಲ್ಲದೆ ಅವರನ್ನು ಸದಾ ಗೌರವದಿಂದ ಕಾಣುತ್ತಿದ್ದರು. ಇದರಿಂದ ಸಮಾಜಕ್ಕೆ ಒಂದು ಸಂದೇಶವನ್ನು ನೀಡಿದರು. ಪ್ರತಿಯೊಬ್ಬರೂ ಸ್ತ್ರೀಯನ್ನೂ ಜಗನ್ಮಾತೆಯೆಂದು ಗೌರವ ಆದರದಿಂದ ಕಾಣಬೇಕು; ಪ್ರತಿಯೊಬ್ಬನ ದೃಷ್ಟಿಯೂ ಪವಿತ್ರವಾಗಿರಬೇಕು, ಇಲ್ಲವಾದಲ್ಲಿ ಅವನು ಅಧೋಗತಿಯನ್ನು ಹೊಂದುತ್ತಾನೆ ಎಂದು. ಶ್ರೀಮಾತೆಯ ದೈವತ್ವವನ್ನು ಅರಿಯಬಲ್ಲ ಸಾಮರ್ಥ್ಯವಿದ್ದುದು ಎಂದರೆ ಅದು ಸ್ವಾಮಿ ವಿವೇಕಾನಂದರಿಗೆ. ಅವರು ತಮ್ಮ ಸೋದರ ಸಂನ್ಯಾಸಿಗೆ ಬರೆದ ಪತ್ರವೊಂದರಲ್ಲಿ ಹೀಗೆ ಹೇಳುತ್ತಾರೆ: ''ಸೋದರ, ನೋಡು, ನನ್ನ ಹೆಸರು ನಿಜಕ್ಕೂ ವಿವೇಕಾನಂದನೇ ಹೌದಾದಲ್ಲಿ ನಿಮಗೆ ನಾನು ಜೀವಂತ ದುರ್ಗೆಯನ್ನು ಆರಾಧಿಸಿ ತೋರಿಸಿಕೊಡುತ್ತೇನೆ. ಶ್ರೀ ಶಾರದಾದೇವಿಯವರನ್ನು ಯಾರು ಸಾಕ್ಷಾತ್ ಜಗನ್ಮಾತೆಯೆಂದು ಒಪ್ಪಿ ಗೌರವಿಸುವುದಿಲ್ಲವೋ ಅವನಿಗೆ ಧಿಕ್ಕಾರವಿರಲಿ!'' ಎಂದು. *(ಅಲ್ಲೇ, ಪು.೩೭೯)* ಸ್ವಾಮಿ ವಿವೇಕಾನಂದರು ಶ್ರೀಮಾತೆಯವರನ್ನು ದುರ್ಗಾಮಾತೆಯಾಗಿ ದರ್ಶನ ಮಾಡಿದ್ದರು. ಶ್ರೀರಾಮಕೃಷ್ಣರ ಶಿಷ್ಯರ ಪಾಲಿಗೆ ಶ್ರೀಮಾತೆಯವರು ಕೇವಲ ಗುರುಪತ್ನಿಯಾಗಿರಲಿಲ್ಲ ; ಪ್ರೇಮಮಯಿ ಮಾತೆಯೂ ಆಗಿದ್ದರು. ತಾವು ಮಾಡುತಿದ್ದ ಯಾವುದೇ ಕಾರ್ಯದಲ್ಲಿ ಶ್ರೀಮಾತೆಯವರ ಬಳಿ ಸಲಹೆಯನ್ನು ಕೇಳುತ್ತಿದ್ದರು, ಅವರ ಅನುಮತಿ ಆಶೀರ್ವಾದವನ್ನು ಪಡೆಯುತ್ತಿದ್ದರು. ಅಷ್ಟೇಅಲ್ಲದೇ ಅವರು 'ಸಂಘಜನನಿ'ಯೂ ಆಗಿದ್ದರು.

### ಸ್ವಾಮಿ ಪ್ರೇಮಾನಂದರ ಮಾತುಗಳಲ್ಲಿ

ಶ್ರೀಮಾತೆಯವರ ಬಗ್ಗೆ ಸ್ವಾಮಿ ಪ್ರೇಮಾನಂದರು ಹೀಗೆ ಹೇಳುತ್ತಾರೆ: ''ಶ್ರೀಮಾತೆಯವರನ್ನು ಯಾರು ಅರ್ಥಮಾಡಿಕೊಳ್ಳಬಲ್ಲರು? ಅವರಲ್ಲಿ ಯಾವ ವೈಭವದ ಸುಳಿವೇ ಕಾಣುವುದಿಲ್ಲವಲ್ಲ! ಶ್ರೀರಾಮಕೃಷ್ಣರಲ್ಲಾದರೋ ನಾವು ಜ್ಞಾನದ ಆವಿರ್ಭಾವವನ್ನು ಕಾಣಬಹುದು. ಆದರೆ ಶ್ರೀಮಾತೆಯವರಲ್ಲಿ? ಆ ಜ್ಞಾನವೆಂಬುದು ಸಂಪೂರ್ಣ ಅಡಗಿಕೊಂಡಿದೆ! ಅವರು ನಿಜಕ್ಕೂ ಅದ್ಭುತ ಶಕ್ತಿ. ಅವರು ಎಲ್ಲರನ್ನೂ ತಮ್ಮ ಮಡಿಲಲ್ಲೆತ್ತಿಕೊಂಡು ಬಿಡುತ್ತಾರೆ. ನಿಜಕ್ಕೂ ಅವರು ಅನಂತ ಶಕ್ತಿ! ಶ್ರೀರಾಮಕೃಷ್ಣರು ತಮ್ಮ ಶಿಷ್ಯರನ್ನು ಪರೀಕ್ಷಿಸಿ ಶಿಷ್ಯರನ್ನಾಗಿ ಮಾಡಿಕೊಂಡರು. ಯಾರೆಂದರೆ ಅವರ ಕೈಯಿಂದ ಏನನ್ನೂ ಸ್ವೀಕರಿಸುತ್ತಿರಲಿಲ್ಲ. ಆದರೆ ಶ್ರೀಮಾತೆಯವರು ಹಾಗಲ್ಲ. ಜಾತಿಭೇದವಿಲ್ಲದೆ ತಮ್ಮ ಬಳಿಗೆ ಬಂದವರಿಗೆಲ್ಲ ಪ್ರೀತಿಯಿಂದ ಮಾತನಾಡಿಸುತ್ತಾ, ಅವರಿಗೆ ಸ್ವಯಂ ತಾವೇ ತಿನ್ನಲು ಕೊಡುತ್ತಿದ್ದುದಲ್ಲದೆ ಅವರ ಎಂಜಲು ಎಲೆಯನ್ನು ತೆಗೆದು ಸ್ವಚ್ಛಗೊಳಿಸುತ್ತಿದ್ದರು. ಶ್ರೀಮಾತೆ ಎಂತಹ ಕರುಣಾಮೂರ್ತಿ! ದಯಾಮಯಿ! ವಾತ್ಸಲ್ಯದಾತೆ!''

### ತೇಲೋಭೇಲೋ ಡಕಾಯಿತರ ಘಟನೆ

ಒಂದು ಬಾರಿ ಶ್ರೀಮಾತೆಯವರು ಜಯರಾಮಬಾಟಿಯಿಂದ ದಕ್ಷಿಣೇಶ್ವರಕ್ಕೆ ಹಲವು ಪ್ರಯಾಣಿಕರೊಂದಿಗೆ ಬರುತ್ತಿದ್ದರು. ಮಧ್ಯೆ ತೇಲೋಭೇಲೋ ಎಂಬ ಪ್ರದೇಶದ ಮೂಲಕ ಹೋಗಬೇಕಾಗಿತ್ತು. ಅಲ್ಲಿ ಕಳ್ಳರ ಭಯ. ಜೊತೆಯಲ್ಲಿ ಇದ್ದವರು ಕಾಡನ್ನು ಸಂಜೆಯ ಮುಂಚೆ ದಾಟಬೇಕೆಂದು ವೇಗವಾಗಿ ಹೋಗುತ್ತಿದ್ದರು. ಅವರ ವೇಗಕ್ಕೆ ಸಮವಾಗಿ ನಡೆಯಕ್ಕೆ ಆಗದೆ ಅವರು 'ನೀವು ಮುಂದೆ ಹೋಗಿ, ನಾನು ನಿಧಾನವಾಗಿ ಬಂದು ಸೇರುತ್ತೇನೆ' ಎಂದು ಹೇಳಿದರು. ಅವರೆಲ್ಲರೂ ಮುಂದೆ ಹೊರಟರು. ಕೊನೆಗೆ ಶಾರದಾದೇವಿಯವರೊಬ್ಬರೇ ಹಿಂದೆ ಉಳಿದರು. ಸಂಜೆಯಾಯಿತು. ಒಬ್ಬ ಕರಾಳ ಮನುಷ್ಯನು ದೊಡ್ಡ ದೊಣ್ಣೆಯನ್ನು ಹಿಡಿದುಕೊಂಡು ಅವರತ್ತ ಬರುತ್ತಿದ್ದನು. ಈ ಮನುಷ್ಯನನ್ನು ನೋಡಿ ಶ್ರೀಮಾತೆಗೆ ಅಂಜಿಕೆಯಾದರೂ, ಧೈರ್ಯವನ್ನು ತಂದುಕೊಂಡರು. ಡಕಾಯಿತ ಗರ್ಜಿಸುವ ಧ್ವನಿಯಲ್ಲಿ ''ಯಾರದು, ಇಷ್ಟು ಹೊತ್ತಿನಲ್ಲಿ? ಎಲ್ಲಿಗೆ ಹೋಗುತ್ತಾ ಇದ್ದೀ ನೀನು?'' ಎಂದು ಕೇಳಿದ. ಶ್ರೀಮಾತೆಯವರು ಪೂರ್ವದ ಕಡೆಗೆ ಎಂದು ಹೇಳುತ್ತಾ ಅವನನ್ನೇ ನೆಟ್ಟದೃಷ್ಟಿಯಿಂದ ನೋಡಿದರು. ಆ ನೋಟದಲ್ಲಿ ಅವನೇನನ್ನು ಕಂಡನೋ! ಮರುಕ್ಷಣ ಮೃದು ಧ್ವನಿಯಲ್ಲಿ ಹೇಳಿದ: ''ಹೆದರಿಕೊಳ್ಳಬೇಡ. ನನ್ನ ಹೆಂಡತಿ ಈ ಕಡೆಗೇ ಬರುತ್ತಿದ್ದಾಳೆ.'' ಅಲ್ಲೇ ದೂರದಲ್ಲಿ ಹೆಂಗಸೊಬ್ಬಳು ಬರುತ್ತಿರುವುದನ್ನು ಶ್ರೀಮಾತೆಯವರು ಕಂಡರು. ಶ್ರೀಮಾತೆ ಹೇಳಿದರು: ''ಅಪ್ಪಾ, ನನ್ನ ಜೊತೆಯವರು ಬಿಟ್ಟುಹೋದರು. ನನಗೆ ದಾರಿ ತಪ್ಪಿದಂತೆ ಕಾಣುತ್ತದೆ. ನಿನ್ನ ಅಳಿಯ ದಕ್ಷಿಣೇಶ್ವರದಲ್ಲಿ ಇರುವರು. ನೀನು ನನ್ನನ್ನು ಅಲ್ಲಿಗೆ ಹೇಗೋ ಕರೆದುಕೊಂಡು ಹೋಗಿಬಿಟ್ಟರೆ ಅವರು ತುಂಬಾ ಸಂತೋಷಪಡುವರು.'' ತಮ್ಮನ್ನು 'ಅಪ್ಪ, ಅಮ್ಮಾ' ಎಂದು ಕರೆದುದನ್ನು ನೋಡಿ

ಆ ಡಕಾಯಿತ ದಂಪತಿಗಳ ಹೃದಯ ಕರಗಿತು. ಡಕಾಯಿತ ಹೇಳಿದ, ''ಈಗ ರಾತ್ರಿಯಾಗಿದೆ. ನಾಳೆ ಬೆಳಿಗ್ಗೆ ಕರೆದುಕೊಂಡು ಹೋಗುತ್ತೇನೆ. ಇವತ್ತು ರಾತ್ರಿ ನಮ್ಮ ಮನೆಯಲ್ಲಿ ಉಳಿದುಕೋ'' ಎಂದು. ಮರುದಿನ ಡಕಾಯಿತ ದಂಪತಿ ಇಬ್ಬರೂ ಶ್ರೀಮಾತೆಯವರನ್ನು ಕರೆದುಕೊಂಡು ದಕ್ಷಿಣೇಶ್ವರಕ್ಕೆ ಹೋದರು. ಮುಂದೆ ಆ ಡಕಾಯಿತ ದಂಪತಿಗಳು ತಮ್ಮ ಮಗಳು ಶ್ರೀಮಾತೆಯವರನ್ನು ನೋಡಲು ಆಗಾಗ ದಕ್ಷಿಣೇಶ್ವರಕ್ಕೆ ಹೋಗಿ ಬರುತ್ತಿದ್ದರು. ಹೋಗುವಾಗ ಶ್ರೀಮಾತೆಗೆ ಏನನ್ನಾದರು ತಿನ್ನಲು ತರುತ್ತಿದ್ದರು. ಇದರ ಬಗ್ಗೆ ಮಾತನಾಡುತ್ತಿದ್ದಾಗ ಶ್ರೀಮಾತೆ ಹೇಳುತ್ತಾರೆ, ''ಅವನು ಈಗ ಸಾಧುವಿನಂತೆ ಕಂಡರೂ ಹಿಂದೆ ಹಲವು ದರೋಡೆ ಮತ್ತು ಕೊಲೆಗಳನ್ನು ಮಾಡಿರಬಹುದು'' ಎಂದು. ಇಲ್ಲಿ, ಆ ಡಕಾಯಿತ ಶ್ರೀಮಾತೆಯವರನ್ನು ನೋಡಿ ಕಂಡದ್ದಾದರೂ ಏನನ್ನು ಎಂಬ ಆಲೋಚನೆ ಮೂಡುತ್ತದೆ. ಒಬ್ಬಾಕೆ ಹೆಂಗಸು ಘೋರ ಡಕಾಯಿತನೊಬ್ಬನ ಸಂಪೂರ್ಣ ವ್ಯಕ್ತಿತ್ವವನ್ನು ಒಂದು ನೋಟದಿಂದಲೇ ಬದಲಾಯಿಸಬೇಕಾದರೆ, ಶ್ರೀಮಾತೆಯವರು ಸಾಮಾನ್ಯ ವ್ಯಕ್ತಿಯೆ?

ಇದೇ ಘಟನೆಯ ಸಂಬಂಧವಾಗಿ ಭಕ್ತನೊಬ್ಬ ಶ್ರೀಮಾತೆಯವರ ಬಳಿ ಕೇಳುತ್ತಾನೆ: ''ಅವನು ಹಾಗೆ ನೋಡುತ್ತಾ ನಿಂತು ಬಿಟ್ಟನಲ್ಲ, ಅವನು ನಿಮ್ಮಲ್ಲಿ ಏನನ್ನು ಕಂಡ?''

**ಶ್ರೀಮಾತೆ:** ಅವನು ನನ್ನಲ್ಲಿ ಕಾಳಿಯನ್ನು ಕಂಡದ್ದಾಗಿ ಆಮೇಲೆ ಹೇಳಿದ.

**ಭಕ್ತ:** ಎಂದರೆ ನೀವು ಅವನಿಗೆ ಕಾಳಿಯಾಗಿ ಕಾಣಿಸಿಕೊಂಡಿರಬೇಕು. ದಯವಿಟ್ಟು ಹೇಳಿ ತಾಯಿ, ಮುಚ್ಚಿಡಬೇಡಿ.

**ಶ್ರೀಮಾತೆ:** ನಾನೇಕೆ ಅವನಿಗೆ ಹಾಗೆ ಕಾಣಿಸಿಕೊಳ್ಳಬೇಕು? ನನ್ನನ್ನು ಕಾಳಿಯಾಗಿ ನೋಡಿದ್ದಾಗಿ ಅವನು ಹೇಳಿದ ಅಷ್ಟೇ.

ಆದರೆ ಭಕ್ತ ಅಷ್ಟಕ್ಕೆ ಸುಮ್ಮನಾಗದೆ, ಮತ್ತೆ ಹೇಳಿದ: ''ಎಲ್ಲಾ ಒಂದೇ; ನೀವು ಅವನಿಗೆ ಹಾಗೆ ಕಾಣಿಸಿಕೊಂಡಿರಿ!'' ಅದಕ್ಕೆ ಶ್ರೀಮಾತೆಯವರು ಮುಗುಳ್ನಗುತ್ತ ಹೇಳುತ್ತಾರೆ, ''ನೀನು ಬೇಕಾದರೆ ಹಾಗೆ ತಿಳಿದುಕೊಳ್ಳಬಹುದು!''

ಶ್ರೀಮಾತೆಯವರು ಸ್ವತಃ ಬಾಯಿಬಿಟ್ಟು ಹೇಳದಿದ್ದರೂ, ಅವರ ನಗುವಿನಿಂದ ತಾವು ಕಾಳಿಯೇ ಎಂದು ಒಪ್ಪಿಕೊಂಡರು.

### ಶ್ರೀಮಾತೆಯವರದೇ ಮಾತುಗಳಿಂದ

ಕೆಲವು ಬಾರಿ ನಿಕಟ ಭಕ್ತರು ಶ್ರೀಮಾತೆಯವರು ಜಗನ್ಮಾತೆಯೇ ಎಂದು ಅವರಿಂದಲೇ ತಿಳಿಯಲು ಪ್ರಯತ್ನಪಡುತ್ತಿದ್ದರು. ಕೆಲವು ಬಾರಿ ಶ್ರೀಮಾತೆಯವರ ಸಾಮಾನ್ಯ ಮಾನವರ ವರ್ತನೆಯಿಂದ ಅವರು ದೇವಿಯೋ ಅಲ್ಲವೋ ಎಂಬ ಗೊಂದಲವೂ ಮೂಡುತಿತ್ತು. ಆಗ ಕೆಲವು ಭಕ್ತರು ಶ್ರೀಮಾತೆಯವರ ಬಳಿ ಕೇಳುತ್ತಿದ್ದ ಪ್ರಶ್ನೆಯನ್ನು ಇಲ್ಲಿ ಗಮನಿಸಬಹುದು. ಒಂದು ದಿನ ಶ್ರೀಮಾತೆಯವರು ಅಡಿಗೆ ಮಾಡುತ್ತ ಕುಳಿತಿದ್ದರು. ಆಗ ಒಬ್ಬ ಭಕ್ತನೊಂದಿಗೆ ಮಾತನಾಡುತ್ತ, ಶ್ರೀರಾಮಕೃಷ್ಣರು ಸ್ವಯಂ ಭಗವಂತನೇ ಎಂಬ ಸತ್ಯವನ್ನು ತಿಳಿಸಿದರು. ಅದನ್ನು ಕೇಳಿದ ಭಕ್ತ, ಹಾಗಿದ್ದ ಮೇಲೆ ಇವರೂ ಕೂಡ ಭಗವತಿಯೇ ಇರಬೇಕಲ್ಲವೆ? ಆದರೆ ಇವರು ಹೀಗೆ ಮನೆಯ ಕೆಲಸಗಳಲ್ಲಿ ತೊಡಗಿರುವಂತೆ ಕಣ್ಣಾರೆ ಕಾಣುತ್ತಿದ್ದೇನಲ್ಲ! ಎಂದು ಆಲೋಚಿಸುತ್ತ ಹೀಗೆ ಕೇಳಿದ: ''ಅಮ್ಮಾ, ನೀವು ಸಾಕ್ಷಾತ್ ದೇವಿಯೇ ಅಂದ ಮೇಲೆ ಇಲ್ಲಿ ಸಾಮಾನ್ಯ ಹೆಂಗಸಿನ ಹಾಗೆ ಚಪಾತಿ ತಟ್ಟುತ್ತ ಕುಳಿತಿದ್ದೀರಲ್ಲ, ಇದೆಲ್ಲ ಏನು? ಇದೆಲ್ಲ ಮಾಯಾಲೀಲೆಯೇ ಹಾಗಾದರೆ?''

**ಶ್ರೀಮಾತೆ:** ಮಾಯಾಲೀಲೆಯಲ್ಲದೆ ಇನ್ನೇನು ಮತ್ತೆ? ಇಲ್ಲದಿದ್ದರೆ ನಾನು ಈ ಸ್ಥಿತಿಯಲ್ಲೇಕೆ ಇರಬೇಕಿತ್ತು? ನಾನು ವೈಕುಂಠದಲ್ಲಿ ನಾರಾಯಣನ ಜೊತೆಗಿರಬೇಕಾಗಿದ್ದವಳು. ಆದರೆ ನಾನು ಇಲ್ಲಿಗೇಕೆ ಬಂದೆ ಎಂದರೆ, ಭಗವಂತ ಮನುಷ್ಯರೂಪ ತಾಳಿ ನರಲೀಲೆಯಾಡುವುದಕ್ಕೆ ಇಷ್ಟಪಡುತ್ತಾನಲ್ಲವೆ?

**ಭಕ್ತ:** ನಿಮಗೆ ನಿಮ್ಮ ಸ್ವಸ್ವರೂಪದ ನೆನಪು ಬರುವುದಿಲ್ಲವೆ?

**ಶ್ರೀಮಾತೆ:** ಹೌದು, ಆಗಾಗ ಜ್ಞಾಪಕವಾಗುತ್ತದೆ. ಆಗ, 'ನಾನಿದೇನು ಮಾಡುತ್ತಿದ್ದೇನೆ?' ಅಂತ ಆಲೋಚಿಸುತ್ತೇನೆ. ಆದರೆ ಪುನಃ ಈ ಮಕ್ಕಳು ಮರಿ ಇವುಗಳನ್ನೆಲ್ಲ ಕಂಡು ನನ್ನ ಸ್ವಸ್ವರೂಪವನ್ನು ಮರೆತುಬಿಡುತ್ತೇನೆ.

### ಮಾತೃಭಾವದ ದೈವೀ ಅಭಿವ್ಯಕ್ತಿ

ಇನ್ನೊಂದು ದಿನ ಭಕ್ತನೊಬ್ಬ ಕೇಳಿದ: ''ಅಮ್ಮಾ, ಇತರ ಅವತಾರಗಳೆಲ್ಲ ತಮ್ಮ ಶಕ್ತಿ (ಅಂದರೆ ಪತ್ನಿ) ಹೊರಟುಹೋದ ನಂತರ ದೇಹತ್ಯಾಗ ಮಾಡಿವೆ. ಆದರೆ ಈ ಬಾರಿ ಶ್ರೀರಾಮಕೃಷ್ಣರು ನಿಮ್ಮನ್ನು ಬಿಟ್ಟು ಮೊದಲೇ ಹೊರಟುಹೋದರಲ್ಲ, ಏಕೆ ?'' ಅದಕ್ಕೆ ಶ್ರೀಮಾತೆ, ''ಮಗೂ, ಶ್ರೀರಾಮಕೃಷ್ಣರಿಗೆ ಈ ಜಗತ್ತಿನ ಪ್ರತಿಯೊಂದರ ಮೇಲೂ ಮಾತೃಭಾವವಿತ್ತು ಅಂತ ನಿನಗೆ ಗೊತ್ತಲ್ಲವೆ? ಈ ಸಲ ಆ ಮಾತೃಭಾವವನ್ನು ಜಗತ್ತಿಗೆ ತೋರಿಸಿಕೊಡುವುದಕ್ಕಾಗಿ ನನ್ನನ್ನು ಬಿಟ್ಟು ಹೋಗಿದ್ದಾರೆ'' ಎಂದರು.

*('ಶ್ರೀಶಾರದಾದೇವಿ ವಚನವೇದ', ಪು. ೬೫೨)*

ಜೀವಗಳ ಉದ್ಧಾರಕ್ಕಾಗಿ ತಾವೇ ಮೋಹದ ಮುಸುಕನ್ನು ಸ್ವ-ಇಚ್ಛೆಯಿಂದ ಹಾಕಿಕೊಂಡು ನಾನಾ ಕಷ್ಟಗಳನ್ನು ಅನುಭವಿಸುತ್ತ, ಅವರ ಒಂದೊಂದು ನಡೆ ನುಡಿಗಳಲ್ಲಿ ಆದರ್ಶವನ್ನು ತೋರಿದರು. ಆದರೆ ಸ್ವತಃ ತಾಯಿ ಕೃಪೆ ಮಾಡದೆ ಅವಳ ನಿಜಸ್ವರೂಪವನ್ನಾದರೂ ಹೇಗೆ ಅರಿಯುವುದು? ತಮ್ಮ ಬಳಿಗೆ ಬರುತ್ತಿದ್ದ ಭಕ್ತರಿಗೆ ಅವರು ಮಾತೃವಾತ್ಸಲ್ಯವನ್ನು ನೀಡುತ್ತಿದ್ದರು. ಇನ್ನು ಕೆಲವು ಭಕ್ತರು ವ್ಯಾಕುಲರಾಗಿ ಆಧ್ಯಾತ್ಮಿಕ ಉನ್ನತಿಯನ್ನು ಬೇಡಿದರೆ, ಅದನ್ನು ಅವರು ಕರುಣಿಸುತ್ತಾ ತಮ್ಮ ಮಕ್ಕಳಿಗೆ ಅಭಯವನ್ನು ನೀಡುತ್ತಿದ್ದರು. ಇನ್ನು ಕೆಲವು ವೇಳೆ, 'ಸಾಮಾನ್ಯ ಹೆಂಗಸು ನಾನು. ನನ್ನಿಂದೇನಾದೀತು? ಎಲ್ಲ ಶ್ರೀರಾಮಕೃಷ್ಣರೇ ಮಾಡುತ್ತಾರೆ ಅವರನ್ನು ಪ್ರಾರ್ಥಿಸು' ಎನ್ನುತ್ತಿದ್ದರು.

*(ಗ್ರಂಥಋಣ: ೧) 'ಶ್ರೀ ಶಾರದಾದೇವಿ ಜೀವನಗಂಗಾ', ಸ್ವಾಮಿ ಪುರುಷೋತ್ತಮಾನಂದ.*

*೨) 'ಶ್ರೀಶಾರದಾದೇವಿ ವಚನವೇದ', ಮೈಸೂರು-೨೦ ಶ್ರೀರಾಮಕೃಷ್ಣ ಆಶ್ರಮ ಪ್ರಕಟಣೆ.*

*